

# ರಂಧ್ರಗಳ ರಾಜ!



ಹೆಂಗಸರು ಕಿವಿ, ಮೂಗು ಮುಂತಾದ ಕಡೆಗಳಲ್ಲಿ ರಂಧ್ರಗಳನ್ನು ಚುಚ್ಚಿಸಿಕೊಂಡು ಅಲ್ಲಿ ಆಭರಣಗಳನ್ನು ಧರಿಸುವುದು ಸರ್ವೇ ಸಾಮಾನ್ಯ. ಆದರೆ ಜರ್ಮನಿಯ ಡಾರ್ಟ್‌ಮುಂಡ್‌ನ ರಾಲ್ಫ್ ಬುಚೋಲ್ಜ್ ಹೆಂಗಸಲ್ಲ, ಗಂಡಸು. ಆದರೂ ಇವನಿಗೆ ದೇಹದ ತುಂಬ ರಂಧ್ರಗಳನ್ನು ಚುಚ್ಚಿಸಿಕೊಂಡು ಆಭರಣ ಧರಿಸುವ ಖಯ್ಯಾಲಿ.

ಈತ ತನ್ನ ದೇಹದ ಹಲವಾರು ಭಾಗಗಳಲ್ಲಿ ಒಂದಲ್ಲ, ಎರಡಲ್ಲ ಬರೋಬ್ಬರಿ 453 ರಂಧ್ರಗಳನ್ನು ಚುಚ್ಚಿಸಿಕೊಂಡಿದ್ದಾನೆ. ಅಲ್ಲೆಲ್ಲಾ ಸ್ಟಡ್ ಮತ್ತು ರಿಂಗ್‌ಗಳನ್ನು ಧರಿಸಿಕೊಂಡಿದ್ದಾನೆ. 52 ವರ್ಷ ವಯಸ್ಸಿನ ಈ ಕಂಪ್ಯೂಟರ್ ಎಂಜಿನಿಯರ್‌ಗೆ ಚುಚ್ಚಿಸಿಕೊಳ್ಳುವುದೆಂದರೆ ಬಹಳ ಪ್ರೀತಿಯಂತೆ!

ಈತನಿಗೆ ಈ ಖಯಾಲಿ ಅಂಟಿಕೊಂಡಿದ್ದು 11 ವರ್ಷಗಳ ಹಿಂದೆ. ಈತನ ಚಿತ್ರ ನೋಡಿದರೆ ಮುಖದ ಮೇಲೆಯೇ ಹೆಚ್ಚು ರಂಧ್ರಗಳನ್ನು ಚುಚ್ಚಿಸಿಕೊಂಡಿದ್ದಾನೆ ಎಂದನ್ನಿಸಬಹುದು. ತುಟಿಯ ಒಳ ಮತ್ತು ಹೊರ ಭಾಗದಲ್ಲಿ 94 ಕಡೆ, ಹುಬ್ಬಿನಲ್ಲಿ 25 ಕಡೆ ಮತ್ತು ಮೂಗಿನ ಭಾಗದಲ್ಲಿ 8 ಕಡೆ ಚುಚ್ಚಿಸಿಕೊಂಡಿದ್ದಾನೆ. ಆದರೆ ಅಷ್ಟೇ ಅಲ್ಲ, ಜನನಾಂಗದಲ್ಲಿಯೂ 278 ಕಡೆ ರಂಧ್ರಗಳನ್ನು ಚುಚ್ಚಿಸಿಕೊಂಡು ಅಲ್ಲಿ ಆಭರಣಗಳನ್ನು ಇಟ್ಟುಕೊಂಡಿದ್ದಾನೆ!

ಇದರ ಜತೆಗೆ ಹಚ್ಚೆ ಹಾಕಿಸಿಕೊಳ್ಳುವ ಹುಚ್ಚೂ ಈತನಿಗಿದೆ. ಕೈ, ಕಾಲು ಹಾಗೂ ದೇಹದ ಇತರ ಕಡೆಗಳಲ್ಲೆಲ್ಲಾ ಹಚ್ಚೆಯನ್ನೂ ಹುಯ್ಯಿಸಿಕೊಂಡಿದ್ದಾನೆ. ವಿಶ್ವದಲ್ಲೇ ಅತ್ಯಂತ ಹೆಚ್ಚು ಕಡೆ ರಂಧ್ರಗಳನ್ನು ಚುಚ್ಚಿಸಿಕೊಂಡವ ಎಂಬ ಗಿನ್ನೆಸ್ ದಾಖಲೆ ಈತನ ಹೆಸರಿನಲ್ಲೇ ಇದೆ!

■ ವಿದ್ಯಾ ವಿ ಹಾಲಭಾವಿ